ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಮಾಡಿಸಲಾಯಿತು.

ಅಸಲು ದಾವೆ ನಂಃ 64-2012 ಪಿಡಬ್ಲೂಃ 1

ಡಿಡಬ್ಲೂಃ

ಸಾಕ್ಷಿಧಾರರ ಹೆಸರು ಃ ಶ್ರೀಮತಿ ಮೀರಾಬಾಯಿ ಹೀರಾ ಕಲ್ಘಟಕರ

ಪ್ರತಿಜ್ಞೆಯ ಮೇರೆಗೆ ದಿನಾಂಕಃ 05-06-2017

**ಮುಂದುವರೆದ ಪಾಟೀ ಸವಾಲುಃ- ವಿಚಾರಣೆಃ ಶ್ರೀ ಆರ ಎಸ್ ಹೆಚ್ ಜಿ ವಕೀಲರಿಂದಃ -**

ನಮ್ಮ ತಂದೆ ತಾಯಿಗಳಿಗೆ ನಾವು ನಾಲ್ಕು ಜನ ಮಕ್ಕಳು. ಹಿರಿಯವಳ ಹೆಸರು ಯಶೋಧಾ. ಯಶೋಧಾ ಅಂದರೆ ಪ್ರತಿವಾದಿ ನಂಃ1 ರಿಂದ 5 ರವರ ತಾಯಿ. 2ನೇಯವಳ ಹೆಸರು ಸರಸ್ವತಿ ಯಾನೆ ಯಮುನಾ. ಅವಳು ಈ ದಾವೆಯ 6ನೇ ಪ್ರತಿವಾದಿ ಆಗಿರುತ್ತಾರೆ. 3ನೇಯವರು ರಾಮಾ ಎಂದರೆ 7ನೇ ಪ್ರತಿವಾದಿಯ ಗಂಡ. ನಾನು ಕೊನೆಯವಳು.

ನಮ್ಮ ತಂದೆಯವರು 35 ವರ್ಷಗಳ ಹಿಂದೆ ಮೃತಪಟ್ಟಿದ್ದರು. ನನ್ನ ತಾಯಿಯೂ ಸಹಾ ಅದೇ ಸಮಯದಲ್ಲಿ ತೀರಿಕೊಂಡಿದ್ದರು. ನಾವು ಮೂರು ಜನ ಸಹೋದರಿಯರ ಮದುವೆ ತಂದೆಯವರು ಜೀವಂತ ಇರುವಾಗಲೇ ಆಗಿತ್ತು. ನನ್ನ ಮದುವೆಯಾಗಿ 40 ವರ್ಷಗಳಾಗಿರುತ್ತವೆ. ನನ್ನ ಮದುವೆ ಸಮಯದಲ್ಲಿ ನನಗೆ 27 ವರ್ಷ ವಯಸ್ಸಾಗಿತ್ತು. ನನ್ನ ಮತ್ತು ಸಹೋದರಿಯರು ಮದುವೆಯಾದ ನಂತರ ನಮ್ಮ ಗಂಡನ ಮನೆಯಲ್ಲಿದ್ದು ಅಲ್ಲಿಯೇ ಅವರ ಆಸ್ತಿಯನ್ನು ಸಾಗುವಳಿ ಮಾಡಿಕೊಂಡಿದ್ದೇವೆ.

ಹಿರಿಯ ಅಕ್ಕ ಯಶೋಧಾ ಇವರನ್ನು ಹೊಟೇಗಾಳಿಯಲ್ಲಿ ಮದುವೆ ಮಾಡಿ ಕೊಟ್ಟಿರುತ್ತೇವೆ. ಹಿರಿಯ ಅಕ್ಕ ಯಶೋಧಾ ಹೆಸರಿನಲ್ಲಿ ನನ್ನ ತಾಯಿ ತನ್ನ ಜೀವಿತ ಅವಧಿಯಲ್ಲಿ ಯಾವದೇ ಮೃತ್ಯುಪತ್ರವನ್ನು ಮಾಡಿಕೊಟ್ಟಿಲ್ಲ. ದಾವಾ ಆಸ್ತಿ 1 ರಿಂದ 4ನ್ನು ಯಶೋಧಾಳಿಗೆ ನಮ್ಮ ತಾಯಿ ನೀಡಿಲ್ಲ. ಸದ್ರಿ ದಾವಾ ಆಸ್ತಿಯು ಯಶೋಧಾಗಾಗಲೀ ಹಾಗೂ 1 ರಿಂದ 4ನೇ ಪ್ರತಿವಾದಿಯವರ ಹತ್ತಿರ ಕಬ್ಜೆ ವಹಿವಾಟಿನಲ್ಲಿ ಇರುವದಿಲ್ಲ.

ದಾವಾ ಆಸ್ತಿ 1 ರಿಂದ 4 ಪಿತ್ರಾರ್ಜಿತ ಆಸ್ತಿ ಎಂದರೆ ಅಜ್ಜ- ಮುತ್ತಜ್ಜರಿಂದ ಬಂದ ಆಸ್ತಿ ಎಂದರೆ ಸರಿ. ಉಳಿದ ದಾವಾ ಆಸ್ತಿ 5 ರಿಂದ 7 ಸಹಾ ಅಜ್ಜ ಮುತ್ತಜ್ಜರಿಂದ ಬಂದ ಆಸ್ತಿ ಎಂದರೆ ಸರಿ. ದಾವಾ ಆಸ್ತಿಗಳು ಭೂ ನ್ಯಾಯ ಮಂಡಲಿಯ ಆದೇಶದಿಂದ ಬಂದ ಆಸ್ತಿ ಎಂದರೆ ಸರಿ.

7ನೇ ಪ್ರತಿವಾದಿಯ ಗಂಡ ರಾಮಾ ಇವರು ಈಗಿಂದ್ದ ಸುಮಾರು 7 ವರ್ಷದ ಹಿಂದೆ ತೀರಿಕೊಂಡಿದ್ದಾರೆ. ನಿಮ್ಮ ತಂದೆಯವರು ತೀರಿಕೊಂಡ ಸದ್ರಿ ಆಸ್ತಿಯನ್ನು ನಿನ್ನ ಸಹೋದರ ರಾಮಾ ರವರು ದಾವಾ ಆಸ್ತಿಯ ಗೇಣಿಯನ್ನು ಮತ್ತು ಕಂದಾಯ ತುಂಬುತ್ತಿದ್ದರು ಎಂದರೆ ಸರಿ.

**(ಮುಂದುವರೆದ ಪಾಟೀ ಸವಾಲಿಗೇ ಸಮಯ ಕೋರಿದ್ದು ನೀಡಲಾಗಿದೆ )**

( ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಹೆ. ಸಿವಿಲ್ ಜಡ್ಜ ಕಾರವಾರ